# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 1123
ಸದಸ್ಯರ ಹೆಸರು : ಶ್ರೀ ಡಿ.ಎಸ್. ಅರುಣ್
(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)
ಉತ್ತರಿಸಬೇಕಾದ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು
ಉತ್ತರಿಸಬೇಕಾದ ದಿನಾಂಕ : 18-12-2024

<table>
<tr><th>ಪ್ರಶ್ನೆ</th><th>ಉತ್ತರ</th><th>ಪ್ರಶ್ನೆ</th></tr>
<tr><td>ಅ.</td><td>ಬೆಂಗಳೂರಿನಲ್ಲಿರುವ ವಿವಿಧ ಮಾದರಿಯ ವೈಟ್ ಬೋರ್ಡ್ ಯೆಲ್ಲೋ ಬೋರ್ಡ್ ವಾಹನಗಳ ಸಂಖ್ಯೆ ಎಷ್ಟು: (ಕಳೆದ ಮೂರು ವರ್ಷಗಳ ಮಾಹಿತಿ ಒದಗಿಸುವುದು)</td><td>ಬೆಂಗಳೂರಿನಲ್ಲಿರುವ ವಿವಿಧ ಮಾದರಿಯ ವೈಟ್ ಬೋರ್ಡ್ ಯಲ್ಲೋ ಬೋರ್ಡ್ ವಾಹನಗಳ ಕಳೆದ ಮೂರು ವರ್ಷಗಳ ವಿವರ ಈ ಕೆಳಕಂಡಂತಿದೆ:-<br><br>
<table>
<tr><th>ವರ್ಷ</th><th>2021-22</th><th>2022-23</th><th>2023-24</th></tr>
<tr><td>ಸಾರಿಗೆಯೇತರ ವಾಹನ (ವೈಟ್ ಬೋರ್ಡ್)</td><td>9227719</td><td>9813910</td><td>10456283</td></tr>
<tr><td>ಸಾರಿಗೆ ವಾಹನ (ಯಲ್ಲೋ ಬೋರ್ಡ್)</td><td>1181570</td><td>1234627</td><td>1318798</td></tr>
</table>
</td></tr>
<tr><td>ಆ.</td><td>ಸ್ವಂತ ಬಳಕೆಯ ವಾಹನವನ್ನು ನಿಯಂತ್ರಿಸುವ ಸಲುವಾಗಿ ಸಾರ್ವಜನಿಕ ಸಾರಿಗೆ ಸರ್ಕಾರ ಒತ್ತು ನೀಡಿದೆಯೇ;</td><td><u>ಬಿ.ಎಂ.ಟಿ.ಸಿ.</u><br><br>ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು, ಸಾರ್ವಜನಿಕ ಸೇವಾ ಸಂಸ್ಥೆಯಾಗಿದ್ದು, ಬೆಂಗಳೂರು ನಗರ ಹಾಗೂ ಹೊರ ವಲಯದ ಸಾರ್ವಜನಿಕ ಪ್ರಯಾಣಿಕರಿಗೆ ಉತ್ತಮ, ಸುಲಭ, ಸುರಕ್ಷಿತ ಸಾರಿಗೆ ಸೇವೆಯನ್ನು ಒದಗಿಸಲು ನಿರಂತರವಾಗಿ ಶ್ರಮಿಸುತ್ತಿದೆ.<br><br>
<ul>
<li>ಈ ನಿಟ್ಟಿನಲ್ಲಿ ಪ್ರತಿದಿನ ಹವಾನಿಯಂತ್ರಿತ ಸಾರಿಗೆಗಳನ್ನು ಒಳಗೊಂಡಂತೆ 5,813 ಅನುಸೂಚಿಗಳನ್ನು 60,805 ಸುತ್ತುವಳಿಗಳೊಂದಿಗೆ 11.94 ಲಕ್ಷ ಕಿ.ಮೀ. ಗಳಲ್ಲಿ ಬೆಂಗಳೂರು ನಗರ ಹಾಗೂ ಹೊರವಲಯದ ಪ್ರಯಾಣಿಕರ ದಟ್ಟಣೆ / ಅವಶ್ಯಕತೆಗನುಗುಣವಾಗಿ ಕಾರ್ಯಾಚರಣೆ ಮಾಡುತ್ತಿದ್ದು, ಸರಾಸರಿ 40 ಲಕ್ಷ ಪ್ರಯಾಣಿಕರು ಪ್ರಯಾಣಿಸುತ್ತಿದ್ದಾರೆ.</li>
<li>ಪ್ರಯಾಣಿಕರ ಬೇಡಿಕೆ ಹಾಗೂ ಒತ್ತಡಕ್ಕನುಗುಣವಾಗಿ ಹೊಸ ಮಾರ್ಗಗಳನ್ನು ಪರಿಚಯಿಸಿ, ಸಾರಿಗೆ ಸೇವೆಗಳನ್ನು ಕಾರ್ಯಾಚರಣೆಗೊಳಿಸಲಾಗುತ್ತಿದೆ.</li>
<li>ಆಗಿಂದಾಗ್ಗೆ, ಪ್ರಯಾಣಿಕರ ಬೇಡಿಕೆ ಮತ್ತು ಅವಶ್ಯಕತೆಗನುಗುಣವಾಗಿ ಅನುಸೂಚಿಗಳ ಪರಿಷ್ಕರಣೆ / ವಿಸ್ತರಣೆ / ರದ್ದತಿಗೊಳಿಸಲಾಗುತ್ತಿದೆ.</li>
<li>ಮೆಟ್ರೋ ರೈಲು ಪ್ರಯಾಣಿಕರಿಗೆ ಮೆಟ್ರೋ ರೈಲು ನಿಲ್ದಾಣದಿಂದ ವಾಸಸ್ಥಳಗಳಿಗೆ ತಲುಪಲು (first and last mile connectivity) ಒಟ್ಟು 51 ಮಾರ್ಗಗಳಲ್ಲಿ 190 ಅನುಸೂಚಿಗಳನ್ನು 2500 ಮೆಟ್ರೋ ಫೀಡರ್ ಸೇವೆಗಳನ್ನು ಆಚರಣೆಗೊಳಿಸಲಾಗುತ್ತಿದೆ.</li>
<li>ಪ್ರವಾಸಿಗರ ಅನುಕೂಲಕ್ಕಾಗಿ ವಾರಾಂತ್ಯ ಹಾಗೂ ರಜಾ ದಿನಗಳಲ್ಲಿ ಈಶಾ ಫೌಂಡೇಷನ್ ಟೂರ್ ಪ್ಯಾಕೇಜ್ ಹಾಗೂ ಬೆಂಗಳೂರು ರೌಂಡ್ಸ್ ಸಾರಿಗೆಗಳನ್ನು ಪ್ರಾರಂಭಿಸಲಾಗಿದೆ.</li>
</ul>
ಹೆಚ್ಚಿನ ಸಂಖ್ಯೆಯಲ್ಲಿ ಪ್ರಯಾಣಿಕರನ್ನು ಆಕರ್ಷಿಸಲು ಕೆಳಕಂಡಂತೆ ಕ್ರಮ ವಹಿಸಲಾಗಿದೆ.<br><br>
<ul>
<li>ಬಸ್ಸು/ಮಾರ್ಗಗಳ ವೇಳಾಪಟ್ಟಿ ಹಾಗೂ ಬಸ್ಸುಗಳ Live Tracking ಮಾಹಿತಿ ಲಭ್ಯವಾಗುವಂತೆ Mobile App ಅನ್ನು ಅನುಷ್ಠಾನಗೊಳಿಸಲಾಗಿದೆ ಹಾಗೂ ಬಸ್ ನಿಲುಗಡೆಗಳಲ್ಲಿ PIS Board ಗಳನ್ನು Install ಮಾಡಲಾಗಿದೆ.</li>
<li>ಮಹಿಳಾ ಪ್ರಯಾಣಿಕರ ಸುರಕ್ಷತೆಗಾಗಿ ಬಸ್ಸುಗಳಲ್ಲಿ ಪ್ಯಾನಿಕ್ ಬಟನ್</li>
</ul>
</td></tr>
</table>

| ಪ್ರಶ್ನೆ | ಉತ್ತರ | ಪ್ರಶ್ನೆ |
|---|---|---|
| | | ಸಿಸಿಟಿವಿ ಕಣ್ಗಾವಲು ವ್ಯವಸ್ಥೆಗಳನ್ನು ಕಲ್ಪಿಸಲಾಗಿದೆ.<br>• UPI Payment ಹಾಗೂ Digital Pass ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ.<br>• ಮಾಸಿಕ, ದಿನದ ಹಾಗೂ ವಾರದ ಪಾಸುಗಳನ್ನು ವಿತರಿಸಲಾಗುತ್ತಿದೆ.<br>• ವಜ್ರ ಸಾರಿಗೆಯ ಮಾಸಿಕ ಪಾಸಿನ ದರ ರೂ.2363/- ರಿಂದ ರೂ.1800/- ಹಾಗೂ ದಿನದ ಪಾಸಿನ ದರ ರೂ.147/- ರಿಂದ ರೂ.120/- ಕ್ಕೆ ಕಡಿಮೆಗೊಳಿಸಿ ಪರಿಷ್ಕರಿಸಲಾಗಿದೆ.<br><br>ಸಾಮಾನ್ಯ ಮಾಸಿಕ ಪಾಸುದಾರರು ಹಾಗೂ ಹಿರಿಯ ನಾಗರೀಕ ಮಾಸಿಕ ಪಾಸುದಾರರು ವಜ್ರ ಸೇವೆಗಳಲ್ಲಿ ಪ್ರಯಾಣಿಸಲು ಪ್ರತಿ ಸುತ್ತುವಳಿಗಳ ಟಿಕೇಟ್ ದರ ರೂ.25/- ಕ್ಕೆ ನಿಗದಿಪಡಿಸಿದೆ. |
| ಇ. | ವಾಹನಗಳ ಸಂಚಾರದಿಂದಾಗಿ ರಸ್ತೆಗಳು ಅಧಿಕ ಒತ್ತಡವನ್ನು ಎದುರಿಸುತ್ತಿದ್ದು, ಸಾರ್ವಜನಿಕರ ಆರೋಗ್ಯ ಮತ್ತು ಸುಗಮ ಸಂಚಾರಕ್ಕೆ ಸರ್ಕಾರ ಹೊಂದಿರುವ ದೂರದೃಷ್ಟಿ ಯೋಜನೆಗಳೇನು? | **<u>ಲೋಕೋಪಯೋಗಿ ಇಲಾಖೆ</u>**<br><br>ಬೆಂಗಳೂರು ಟ್ರಾಫಿಕ್ ಸಮಸ್ಯೆ ಪರಿಹಾರಕ್ಕೆ ದೂರದೃಷ್ಟಿ ಯೋಜನೆಗಳ ವಿವರಗಳು:<br><br>1. **ಸಮಗ್ರ ರಸ್ತೆ ಮಾಸ್ಟರ್ ಪ್ಲ್ಯಾನ್:**<br>ಬೆಂಗಳೂರು ನಗರ ಮತ್ತು ಗ್ರಾಮೀಣ ಜಿಲ್ಲೆಗಳನ್ನೊಳಗೊಂಡ ಸಮಗ್ರ ರಸ್ತೆ ಮಾಸ್ಟರ್ ಪ್ಲ್ಯಾನ್ ರಚನೆ ಅಗತ್ಯ. ಭೌಗೋಳಿಕ ಮಾಹಿತಿ ವ್ಯವಸ್ಥೆ (ಜಿಐಎಸ್) ಮತ್ತು ಟ್ರಾಫಿಕ್ ಮಾದರಿಗಳ ಉಪಯೋಗದಿಂದ ಭವಿಷ್ಯದ ಟ್ರಾಫಿಕ್ ಹೆಚ್ಚಳವನ್ನು ಊಹಿಸಿ ಯೋಜನೆ ರೂಪಿಸುವುದು.<br><br>2. **ಉತ್ತಮ ವಿನ್ಯಾಸದ ರಸ್ತೆ:**<br>ಎಲ್ಲಾ ರಸ್ತೆಗಳು ಪೂರ್ಣ ಉದ್ದದ ಸಮಾನ ಅಗಲದ ಕಾರಿಡಾರ್‌ಗಳು ಇರುವಂತೆ ಮತ್ತು ಬಾಟಲ್‌ನೆಕ್ ಭಾಗಗಳನ್ನು ಗುರುತಿಸಿ ಸರಿಪಡಿಸಿ, ನಿರಂತರ ವಾಹನ ಚಲನೆಗೆ ಅನುಕೂಲವಾಗುವಂತಹ ವ್ಯವಸ್ಥೆ ಮಾಡಲು ಯೋಜಿಸುವುದು.<br><br>3. **ರಸ್ತೆ ವಿಸ್ತರಣೆ:**<br>ಅತಿ ಹೆಚ್ಚು ಜನಸಾಂಧ್ರತೆ ಇರುವ ಪ್ರದೇಶಗಳಲ್ಲಿ ರಸ್ತೆಗಳನ್ನು ಅಗಲವಿರಿಸಬೇಕು.<br><br>4. **ಜಂಕ್ಷನ್‌ಗಳ ವ್ಯವಸ್ಥೆ:**<br>ಪ್ರಮುಖ ರಸ್ತೆಗಳ ಜಂಕ್ಷನ್‌ಗಳನ್ನು ವೈಜ್ಞಾನಿಕ ವಿನ್ಯಾಸದೊಂದಿಗೆ ಅಭಿವೃದ್ಧಿ ಪಡಿಸಬೇಕಾಗಿದೆ. ಫ್ಲೈಓವರ್‌ಗಳು, ಅಂಡರ್ ಪಾಸ್‌ಗಳು ಮತ್ತು ಸಿಗ್ನಲ್ ಸಿಂಕ್ರೋನೈಸೇಶನ್‌ನಿಂದಾಗಿ ಸಂಚಾರ ದಟ್ಟಣೆ ಸುಗಮಗೊಳಿಸಬಹುದು.<br><br>5. **ಪೆರಿಫೆರಲ್ ರಿಂಗ್ ರಸ್ತೆ (ಪಿಆರ್‌ಆರ್)**<br>ಪಿಆರ್‌ಆರ್ ನಿರ್ಮಾಣವನ್ನು ಶೀಘ್ರಗತಿಯಲ್ಲಿ ಕೈಗೊಳ್ಳುವುದು.<br><br>ನಗರದಿಂದ ಹೊರಹೊಮ್ಮುವ ಎಲ್ಲಾ ರೇಡಿಯಲ್ ರಸ್ತೆಗಳು ಪಿಆರ್‌ಆರ್‌ಗೆ ಸಂಪರ್ಕಿತವಾಗುವಂತೆ ಯೋಜಿಸುವುದು.<br><br>6. **ನಾರ್ಥ್:ಸೌತ್ ಮತ್ತು ಈಸ್ಟ್:ವೆಸ್ಟ್ ಕಾರಿಡಾರ್‌ಗಳು:**<br>ಉತ್ತರ-ದಕ್ಷಿಣ ಮತ್ತು ಪೂರ್ವ-ಪಶ್ಚಿಮ ದಿಕ್ಕುಗಳಲ್ಲಿ ಎಲಿವೇಟಡ್ ಅಥವಾ ಆಟ್‌ಗ್ರೇಡ್ ಕಾರಿಡಾರ್‌ಗಳನ್ನು ನಿರ್ಮಿಸಿ ನಿರಂತರ ವಾಹನ ಸಂಚಾರಕ್ಕೆ ಅನುಕೂಲ ಮಾಡುವುದು.<br><br>7. **ಮಲ್ಟಿಮೋಡಲ್ ಸಾರಿಗೆ ಸಂಸ್ಥೆ:**<br>ಮೆಟ್ರೋ, ಉಪನಗರ ರೈಲು ಮತ್ತು ಬಸ್ ಸೇವೆಗಳ ಸಮಗ್ರ ಜಾಲವನ್ನು ಅಭಿವೃದ್ಧಿ ಪಡಿಸಿ ಪಾರ್ಕ್-ಅಂಡ್-ರೈಡ್ ಹಬ್‌ಗಳ ಮೂಲಕ ಸಾರ್ವಜನಿಕ ಸಾರಿಗೆ ಬಳಕೆಯನ್ನು ಉತ್ತೇಜಿಸುವುದು. |

| ಪ್ರಶ್ನೆ | ಉತ್ತರ | ಪ್ರಶ್ನೆ |
|---|---|---|

8. **ವಾಹನಗಳ ಸಂಖ್ಯೆಯನ್ನು ನಿಯಂತ್ರಿಸಲು ನೀತಿ:**
ಖಾಸಗಿ ವಾಹನಗಳ ಮಾಲೀಕರಿಗೆ ಹೆಚ್ಚುವರಿ ನಗರ ದಟ್ಟಣೆ ತೆರಿಗೆ ವಿಧಿಸಿ, ವಿದ್ಯುತ್ ಚಾಲಿತ ವಾಹನಗಳ ಬಳಕೆಯನ್ನು ಉತ್ತೇಜಿಸಲು ಪ್ರೋತ್ಸಾಹಕ ವ್ಯವಸ್ಥೆ ಮಾಡುವುದು.

9. **ಪಾರ್ಕಿಂಗ್ ನೀತಿ:**
ಪಾರ್ಕಿಂಗ್ ಉಲ್ಲಂಘನೆಗಳ ಮೇಲೆ ಕಠಿಣ ಕ್ರಮ ಕೈಗೊಳ್ಳುವುದು. ರಸ್ತೆಯ ಇಕ್ಕೆಲಗಳಲ್ಲಿ ವಾಹನಗಳ ಪಾರ್ಕಿಂಗ್ ನಿಷೇಧಿಸುವುದು. ಬಹಳ ಜನಸಂದಣಿ ಪ್ರದೇಶಗಳಲ್ಲಿ ಬಹುಮಹಡಿ ಪಾರ್ಕಿಂಗ್ ಸೌಲಭ್ಯಗಳನ್ನು ಒದಗಿಸುವುದು.

10. **ಉಪನಗರಗಳ ಅಭಿವೃದ್ಧಿ:**
ತುಮಕೂರು, ರಾಮನಗರ, ಕೋಲಾರ, ಕನಕಪುರ, ಚಿಕ್ಕಬಳ್ಳಾಪುರ ಮತ್ತು ದೊಡ್ಡಬಳ್ಳಾಪುರದಂತಹ ಉಪನಗರಗಳಲ್ಲಿ ಉದ್ಯೋಗ ಅವಕಾಶಗಳು, ಅರೋಗ್ಯ ಸೇವೆಗಳ ಮತ್ತು ಶೈಕ್ಷಣಿಕ ಸೌಲಭ್ಯಗಳನ್ನು ಅಭಿವೃದ್ಧಿ ಪಡಿಸುವುದು.

**ಹೆಚ್ಚುವರಿ ಕ್ರಮಗಳು:**

**ಸ್ಮಾರ್ಟ್ ಟ್ರಾಫಿಕ್ ನಿರ್ವಹಣೆ:**

ಸಂಚಾರ ಅಡಾಪ್ಟಿವ್ ಸಿಗ್ನಲ್‌ಗಳು ಮತ್ತು ತಕ್ಷಣದ ಚಲನೆ ಗಮನ ನಿರೀಕ್ಷಣಾ ವ್ಯವಸ್ಥೆಗಳನ್ನು ಅಳವಡಿಸುವುದು.

ಪಾದಚಾರಿ ಹಾಗೂ ಸೈಕಲ್ ಟ್ರ್ಯಾಕ್ ಮತ್ತು ಪಾದಚಾರಿ ಮಾರ್ಗಗಳ ನಿರ್ಮಾಣವನ್ನು ಉತ್ತೇಜಿಸುವುದು.

**ಕಾರ್‌ಪೂಲಿಂಗ್ ನೀತಿ:**

ಕಾರ್‌ಪೂಲಿಂಗ್ ಮತ್ತು ಸಾರ್ವಜನಿಕ ಸಾರಿಗೆ ಬಳಕೆಯನ್ನು ಪ್ರೋತ್ಸಾಹಿಸಲು ಪ್ರೋತ್ಸಾಹಕ ಪ್ಯಾಕೇಜ್‌ಗಳನ್ನು ನೀಡುವುದು.

ಮೇಲ್ಕಂಡ ಕ್ರಮಗಳು ಬೆಂಗಳೂರು ನಗರದ ಸಾರಿಗೆ ವ್ಯವಸ್ಥೆಯಲ್ಲಿ ಮುಖ್ಯ ಪರಿವರ್ತನೆ ತರಲು ಸಹಾಯಕವಾಗುತ್ತದೆ.

**ಪೊಲೀಸ್ ಇಲಾಖೆ**

ಬೆಂಗಳೂರಿನ ಸಂಚಾರ ನಿರ್ವಹಣೆ ಕ್ಷೇತ್ರದಲ್ಲಿ ಹಲವಾರು ಕಾರ್ಯತಂತ್ರದ ಉಪಕ್ರಮಗಳು ಮತ್ತು ಮಧ್ಯಸ್ಥಿಕೆಗಳು ಪ್ರಮುಖ ಪಾತ್ರವನ್ನು ವಹಿಸಿ ಒಟ್ಟಾರೆ ಚಿತ್ರಣವನ್ನು ಬದಲಾಯಿಸುವುದರಲ್ಲಿ ಪ್ರಮುಖ ಪಾತ್ರ ವಹಿಸಿದ್ದು, ಸುಗಮ ಸಂಚಾರದ ದೃಷ್ಟಿಯಿಂದ ಹೊಂದಿರುವ ಯೋಜನೆಗಳನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.

**ಸಂಚಾರ ನಿರ್ವಹಣೆಯತ್ತ ಕೇಂದ್ರೀಕೃತ ವ್ಯವಸ್ಥೆ:**

ಸುಧಾರಿತ ಸಂಚಾರ ನಿರ್ವಹಣೆಯಲ್ಲಿ ಪ್ರಮುಖವಾಗಿ ಗಮನವನ್ನು ವಾಹನಗಳ ಸುಗಮ ಸಂಚಾರಕ್ಕೆ ನೀಡಲಾಗಿದೆಯೇ ಹೊರತು, ಸಂಚಾರ ನಿಯಮ ಉಲ್ಲಂಘನೆಯನ್ನು ದಾಖಲಿಸುವಲ್ಲಿ ಅಲ್ಲ. ನಮ್ಮ ಆದ್ಯತೆಯು ಪ್ರಾಥಮಿಕವಾಗಿ ಸಂಚಾರ ನಿರ್ವಹಣೆಯಾಗಿದ್ದು ಜಂಕ್ಷನ್‌ಗಳಲ್ಲಿ ಕರ್ತವ್ಯ ನಿರ್ವಹಿಸುವ ಅಧಿಕಾರಿ / ಸಿಬ್ಬಂದಿಯವರು ಸುಗಮ ಸಂಚಾರ ವ್ಯವಸ್ಥೆಗೆ ಆದ್ಯತೆ ನೀಡುತ್ತಿದ್ದಾರೆ.

**ಪೀಕ್‌ಅವರ್ ನಿರ್ವಹಣೆ:**
ಪೀಕ್ ಅವರ್‌ಗಳಲ್ಲಿ ಹೆಚ್ಚಿನ ಸರಕು ವಾಹನಗಳ **(HGV)** ನಿಷೇಧ ಮತ್ತು ಮಾರ್ಗ ಬದಲಾವಣೆ ತಂತ್ರಗಳನ್ನು ಜಾರಿಗೊಳಿಸಿರುವುದು ಅತ್ಯಂತ ಪ್ರಮುಖ ಜಂಕ್ಷನ್‌ಗಳಲ್ಲಿ ಸಂಚಾರ ದಟ್ಟಣೆಯನ್ನು ಗಣನೀಯವಾಗಿ ಕಡಿಮೆ ಮಾಡುವಲ್ಲಿ ಯಶಸ್ವಿಯಾಗಿದೆ.

| ಪ್ರಶ್ನೆ | ಉತ್ತರ | ಪ್ರಶ್ನೆ |
|---|---|---|

**ಉದ್ದೇಶಿತ ದಟ್ಟಣೆಯ ನಿಯಂತ್ರಣಕ್ಕೆ ಕ್ರಮಗಳು:**

ಹೆಬ್ಬಾಳ ಜಂಕ್ಷನ್, ಟಿನ್ ಫ್ಯಾಕ್ಟರಿ, ಗೊರಗುಂಟೆಪಾಳ್ಯ ಮತ್ತು ಸಾರಕ್ಕಿಯಂತಹ ಹೆಚ್ಚು ದಟ್ಟಣೆಯ ಜಂಕ್ಷನ್‌ಗಳನ್ನು ಗುರಿಯಾಗಿಟ್ಟುಕೊಂಡು ಕಾರ್ಯತಂತ್ರದ ಮಧ್ಯಸ್ಥಿಕೆಗಳು ಸ್ಪಷ್ಟವಾದ ಫಲಿತಾಂಶಗಳನ್ನು ನೀಡಿವೆ, ಟ್ರಾಫಿಕ್ ಅಡೆತಡೆಗಳನ್ನು ನಿವಾರಿಸಿ, ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಾಗುತ್ತಿದೆ.

**ಮೂಲಸೌಕರ್ಯ ಉನ್ನತೀಕರಣ:**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (BBMP) ವತಿಯಿಂದ ಕೈಗೊಳ್ಳಲಾದ ರಸ್ತೆ ಮೂಲಸೌಕರ್ಯ ಸುಧಾರಣೆ, ಅದರಲ್ಲೂ ಹೈಡೆನ್ಸಿಟಿ ಕಾರಿಡಾರ್ ರಸ್ತೆಗಳಲ್ಲಿನ ಅಭಿವೃದ್ಧಿಗಳು ಸಂಚಾರದ ಹರಿವನ್ನು ಗಣನೀಯವಾಗಿ ಹೆಚ್ಚಿಸಿದೆ.

**ಸುಗಮ ಸಂಚಾರಕ್ಕಾಗಿ- ಸಂಚಾರ ಪೊಲೀಸ್ ವಿಭಾಗದ ಇತರೇ ಉಪಕ್ರಮಗಳೆಂದರೆ:-**

1. **ಇಂಟೆಲಿಜೆಂಟ್ ಟ್ರಾಫಿಕ್ ಮ್ಯಾನೇಜ್‌ಮೆಂಟ್ ಸಿಸ್ಟಮ್:**

ಬೆಂಗಳೂರು ನಗರ ಸಂಚಾರ ಪೊಲೀಸ್ ಘಟಕವು ತಂತ್ರಜ್ಞಾನದ ಬಳಕೆ ಹಾಗೂ ಸಂಯೋಜನೆಗಳನ್ನು ಸುಗಮ, ಸುರಕ್ಷಿತ ಸಂಚಾರ ನಿರ್ವಹಣೆಗಾಗಿ ಹಲವಾರು ಉಪಕ್ರಮಗಳನ್ನು ಕೈಗೊಂಡಿದೆ. ಅಂತಹ ಹಲವು ತಂತ್ರಜ್ಞಾನಗಳಲ್ಲಿ ಇಂಟೆಲಿಜೆಂಟ್ ಟ್ರಾಫಿಕ್ ಮ್ಯಾನೇಜ್‌ಮೆಂಟ್ ಸಿಸ್ಟಂ (ಐ.ಟಿ.ಎಂ.ಎಸ್) ಕೂಡ ಒಂದಾಗಿರುತ್ತದೆ. ಈ ವ್ಯವಸ್ಥೆಯನ್ನು ಡಿಸೆಂಬರ್-2022 ರಿಂದ ನಗರದ ಪ್ರಮುಖ 50 ಜಂಕ್ಷನ್‌ಗಳಲ್ಲಿ ಜಾರಿಗೆ ತರಲಾಗಿದ್ದು, ಒಟ್ಟು 250 ಎ.ಎನ್.ಪಿ.ಆರ್. (ಆಟೋಮ್ಯಾಟಿಕ್ ನಂಬರ್ ಪ್ಲೇಟ್ ರಿಕಗ್ನಿಷನ್) ಹಾಗೂ 80 ಆರ್.ಎಲ್.ವಿ.ಡಿ (ರೆಡ್‌ಲೈಟ್ ವೈಲೇಷನ್ ಡಿಟೆಕ್ಷನ್) ಕ್ಯಾಮೆರಾಗಳನ್ನು ಅಳವಡಿಸಲಾಗಿರುತ್ತದೆ. ಈ ವ್ಯವಸ್ಥೆಯು ಸಂಪರ್ಕರಹಿತ ಸ್ವಯಂಚಾಲಿತ ಸಂಚಾರ ಉಲ್ಲಂಘನೆ ಪತ್ತೆ ಮತ್ತು ನಿಯಮ ಜಾರಿಗಾಗಿ ಇರುವ ಉತ್ತಮ ವ್ಯವಸ್ಥೆಯಾಗಿರುತ್ತದೆ.

2. **ಎಟಿಸಿಎಸ್ ಸಿಗ್ನಲ್‌ಗಳು:**

ಅಡಾಪ್ಟೀವ್ ಟ್ರಾಫಿಕ್ ಕಂಟ್ರೋಲ್ ಸಿಸ್ಟಮ್ ಅನ್ನು ಅತ್ಯುತ್ತಮ ಸಿಗ್ನಲಿಂಗ್ ಮತ್ತು ಸಂಚಾರದ ಹರಿವನ್ನು ಹೆಚ್ಚು ವ್ಯವಸ್ಥಿತವಾಗಿ ಮಾಡಲು ಬಳಸಲಾಗುತ್ತಿದೆ. ಈ ತಂತ್ರಜ್ಞಾನದ ಅಳವಡಿಕೆಯಿಂದ ಸ್ಮಾರ್ಟ್ ಟ್ರಾಫಿಕ್ ನಿರ್ವಹಣೆಯನ್ನು ಕೈಗೊಳ್ಳಲು ಸಹಕಾರಿಯಾಗಿದೆ. ಸಂಚಾರದ ಹರಿವಿನೊಂದಿಗೆ ಹೊಂದಿಕೊಂಡು ಹಸಿರು ದೀಪ ಸಮಯದ ಪರಿಣಾಮಕಾರಿ ಬಳಕೆಯಿಂದ ಸುಗಮ ಸಂಚಾರ ನಿರ್ವಹಣೆಯಾಗುತ್ತಿದೆ.

3. **ಅಸ್ತ್ರಂ:**

ಅಸ್ತ್ರಂ ASTraM **(Actionable Intelligence for Sustainable Traffic Management)** ಎಂಬ ವಿನೂತನ ಉಪಕ್ರಮವು ನಗರದ ಸಂಚಾರದ ಹರಿವಿನ ಬಗ್ಗೆ ಒಳನೋಟಗಳನ್ನು ನೀಡುವ ಸ್ಮಾರ್ಟ್ ಟ್ರಾಫಿಕ್ ಇಂಜಿನ್ ಇದಾಗಿದೆ. ಇದು ಪರಿಣಾಮಕಾರಿಯಾದ ಸಂಚಾರ ನಿರ್ವಹಣೆಗೆ ಲಭ್ಯವಿರುವ ದತ್ತಾಂಶವನ್ನು ಬಳಸಿಕೊಂಡು ಸೂಕ್ತ ಕ್ರಮ ಜರುಗಿಸಿ ಸುಗಮ ಸಂಚಾರ ನಿರ್ವಹಣೆಗೆ ಅನುವು ಮಾಡಿಕೊಡುತ್ತದೆ. ಇದರಲ್ಲಿ ಮುಖ್ಯವಾಗಿ ಕಂಜಷನ್ ಅಲರ್ಟ್‌ಗಳು, ಬಿಟಿಟಿ ಆಧಾರಿತ ಇನ್ಸಿಡೆಂಟ್ ರಿಪೋರ್ಟಿಂಗ್ ಹಾಗೂ ಇವೆಂಟ್ ಮ್ಯಾನೇಜ್‌ಮೆಂಟ್ ಮತ್ತು ಡ್ಯಾಶ್‌ಬೋರ್ಡ್ ಅನಾಲಿಟಿಕ್ಸ್‌ಗಳನ್ನು ಒಳಗೊಂಡಿದೆ.

- **ಕಂಜಷನ್ ಅಲರ್ಟ್‌ಗಳು:**

| ಪ್ರಶ್ನೆ | ಉತ್ತರ | ಪ್ರಶ್ನೆ |
|---|---|---|
| | | ಈ ಉಪಕ್ರಮದಿಂದ ನೈಜ ಸಮಯದಲ್ಲಿ ಠಾಣೆಯ ಯಾವ ರಸ್ತೆಯಲ್ಲಿ ಸಂಚಾರ ದಟ್ಟಣೆ ಹೆಚ್ಚಾಗಿದೆಯೆಂಬ ಬಗ್ಗೆ ಠಾಣಾಧಿಕಾರಿಗೆ ಪ್ರತಿ 15 ನಿಮಿಷಕ್ಕೊಮ್ಮೆ ಎಚ್ಚರಿಕೆ ಸಂದೇಶ (ಅಲರ್ಟ್) ಬರುತ್ತದೆ. ಇದನ್ನು ಈ-ಅಟೆಂಡೆನ್ಸ್ ಆ್ಯಪ್‌ನ ಜೊತೆಗೆ ಸಂಯೋಜಿಸಲಾಗಿದ್ದು, ಜಂಕ್ಷನ್‌ನಲ್ಲಿರುವ ಸಂಚಾರ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗೂ ಸಹ ಲಭ್ಯವಾಗುವುದರಿಂದ ಸುಗಮ ಸಂಚಾರಕ್ಕೆ ಅನುಕೂಲಕರವಾಗಲಿದೆ.<br>• **ಡ್ಯಾಶ್‌ಬೋರ್ಡ್ ಅನಾಲಿಟಿಕ್ಸ್ :**<br>ಸಂಚಾರದ ಹರಿವಿನ ಬಗ್ಗೆ ಮತ್ತು ರಸ್ತೆ ಸುರಕ್ಷತೆಯ ಬಗ್ಗೆ ಕೈಗೊಳ್ಳಬಹುದಾದ ಅಗತ್ಯ ಮುನ್ನೆಚ್ಚರಿಕೆಯ ಬಗ್ಗೆ ಈ ಉಪಕ್ರಮವು ಸಹಕಾರಿಯಾಗಲಿದೆ. ದಟ್ಟಣೆಯ ಉದ್ದ, ವಾಹನಗಳ ಸಂಖ್ಯೆ, ವಾಹನಗಳ ವಿಧ ಇತ್ಯಾದಿಗಳ ಬಗ್ಗೆ ಇದು ಮಾಹಿತಿಯನ್ನು ನೀಡುವುದರೊಂದಿಗೆ ಪರಿಣಾಮಕಾರಿ ಸಂಚಾರ ನಿರ್ವಹಣೆಗೆ ಸಹಾಯಕವಾಗುತ್ತದೆ. ಇದರಿಂದ ಮುಂದಿನ ದಿನಗಳಲ್ಲಿ ಉಂಟಾಗಬಹುದಾದ ದಟ್ಟಣೆ ಬಗ್ಗೆ ಪ್ರಿಡಿಕ್ಟಿವ್ ಅನಾಲಿಸಿಸ್ ಸಹ ಲಭ್ಯವಾಗುವುದರಿಂದ ಈ ದತ್ತಾಂಶವು ಸೂಕ್ತ ಸಂಚಾರ ಯೋಜನೆಯನ್ನು ರೂಪಿಸಲು ಸಹಾಯಕವಾಗುತ್ತದೆ.<br>• **ಬಿಟಿಪಿ ಬಳಕೆ ಮುಖಾಂತರ ಇನ್ಸಿಡೆಂಟ್ ರಿಪೋರ್ಟಿಂಗ್:**<br>ಇದರ ಬಹುಮುಖ್ಯ ಉದ್ದೇಶವೆಂದರೆ, ಅಧಿಕೃತ ಅಧಿಕಾರಿಗಳಿಂದ ರಸ್ತೆಯ ಮೇಲೆ ನಡೆಯುವ ಯಾವುದೇ ಕೃತ್ಯದ ಬಗೆಗೆ ಗೂಗಲ್ ಮ್ಯಾಪ್ ಅಥವಾ ಇನ್ನಿತರ ಮ್ಯಾಪ್‌ಗಳ ಮುಖೇನ ಮಾಹಿತಿಯನ್ನು ರಸ್ತೆ ಬಳಕೆದಾರರಿಗೆ ನೈಜ ಸಮಯದಲ್ಲಿ ತಲುಪಿಸುವುದು. ಸಂಚಾರ ನಿಯಂತ್ರಣ ಕೇಂದ್ರದಲ್ಲಿ ಇವುಗಳ ಬಗ್ಗೆ ಸತತ ನಿಗಾವಣೆ ಮಾಡಲಾಗುತ್ತದೆ. ರಸ್ತೆ ಕಾಮಗಾರಿ, ವಾಹನ ದುರಸ್ತಿ, ಮರ ಬಿದ್ದಿರುವ ಬಗ್ಗೆ, ರಸ್ತೆ ಮುಚ್ಚಲಾಗಿರುವ ಬಗ್ಗೆ ಮ್ಯಾಪ್‌ಗಳಲ್ಲಿ ಮಾಹಿತಿಯನ್ನು ಕ್ರೋಢೀಕರಿಸಿರುವುದರಿಂದ ರಸ್ತೆ ಬಳಕೆದಾರರಿಗೆ ಸಹಕಾರಿಯಾಗುತ್ತಿದೆ.<br>• **ಇವೆಂಟ್ ಮ್ಯಾನೇಜ್‌ಮೆಂಟ್ :**<br>ನಗರದ ವಿವಿಧ ಪ್ರದೇಶಗಳಲ್ಲಿ ನಡೆಯುವ ಕಾರ್ಯಕ್ರಮಗಳು ಮತ್ತು ಅವುಗಳಿಂದ ಉಂಟಾಗುವ ಸಂಚಾರದ ಹರಿವಿನ ವ್ಯತ್ಯಯ ಅಥವಾ ಸಮಸ್ಯೆಗಳ ಬಗ್ಗೆ ಅರ್ಥೈಸಿಕೊಂಡು ಮುಂದಿನ ದಿನಗಳಲ್ಲಿ ಅವುಗಳನ್ನು ನಿವಾರಿಸುವ ಪರಿಹಾರೋಪಾಯಗಳನ್ನು ಕಂಡುಕೊಳ್ಳಲು ಸಹಕಾರಿಯಾಗುತ್ತದೆ. ಸಂಚಾರ ನಿಯಂತ್ರಣ ಕೇಂದ್ರದಲ್ಲಿ ಇವುಗಳ ಬಗ್ಗೆ ಸತತ ನಿಗಾವಣೆ ಮಾಡಲಾಗುತ್ತದೆ.<br>• **ಇ-ಪಾತ್ ಆಂಬ್ಯೂಲೆನ್ಸ್ ಆ್ಯಪ್ :**<br>ಈ ಉಪಕ್ರಮದಿಂದ ನಗರದಲ್ಲಿ ಸಂಚರಿಸುವ ಆಂಬ್ಯೂಲೆನ್ಸ್‌ಗಳ ಸುಗಮ ಸಂಚಾರಕ್ಕೆ ಬಹಳ ಸಹಾಯವಾಗುತ್ತದೆ. ಸಂಚಾರ ನಿರ್ವಹಣಾ ಕೇಂದ್ರದಲ್ಲಿ ಆಂಬ್ಯೂಲೆನ್ಸ್‌ಗಳನ್ನು ನೋಂದಾಯಿಸಿ ಕೊಂಡು ಅವುಗಳು ಪ್ರಯಾಣ ಪ್ರಾರಂಭಿಸುವ ಮತ್ತು ತಲುಪಬೇಕಾದ ಸ್ಥಳಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ ಅವುಗಳ ಸಂಚರಣೆಯನ್ನು ಪರಿಶೀಲಿಸಲಾಗುತ್ತದೆ. 120 ಸೆಕೆಂಡ್‌ಗಳಿಗೆ ಮೀರಿದ ಅವಧಿಯವರೆಗೆ ಯಾವುದೇ ಆಂಬ್ಯೂಲೆನ್ಸ್ ಸಂಚಾರ ದಟ್ಟಣೆಯಲ್ಲಿ ಸಿಕ್ಕಿಹಾಕಿಕೊಂಡಲ್ಲಿ ಈ ಆ್ಯಪ್ ಮುಖೇನ SOS ಬಟನ್ ಆ್ಯಕ್ಟಿವೇಟ್ ಆಗಿ ಕೂಡಲೆ ಅತ್ತಕಡೆ ಗಮನಹರಿಸಿ ಸಂಚಾರ ದಟ್ಟಣೆ ನಿವಾರಣೆ ಮಾಡಲು ಮಾಹಿತಿ ರವಾನೆಯಾಗುತ್ತದೆ. ಈಗಾಗಲೇ 108 ಆಂಬ್ಯುಲೆನ್ಸ್ ಹಾಗೂ ಖಾಸಗಿ ಆಂಬ್ಯುಲೆನ್ಸ್‌ಗಳನ್ನು ಆನ್‌ಬೋರ್ಡ್ ಮಾಡಿಕೊಳ್ಳಲಾಗಿದ್ದು, ಸಾಕಷ್ಟು ಉತ್ತಮ ರೀತಿಯಲ್ಲಿ ತುರ್ತು ವಾಹನಗಳಿಗೆ ನಿರರ್ಗಳ ಸಂಚಾರ ಕಲ್ಪಿಸಲಾಗುತ್ತಿದೆ.<br>• **ಡ್ರೋನ್ ಕ್ಯಾಮೆರಾ :** |

| ಪ್ರಶ್ನೆ | ಉತ್ತರ | ಪ್ರಶ್ನೆ |
|---|---|---|
| | | ಬೆಂಗಳೂರು ನಗರ ಸಂಚಾರ ವಿಭಾಗವು ಹಾಲಿ 10 ಡ್ರೋನ್ ಕ್ಯಾಮೆರಾಗಳನ್ನು ಬಳಸುತ್ತಿದ್ದು ಬೆಳಗಿನ ಮತ್ತು ಸಂಜೆಯ ಪೀಕ್‌ಅವರ್‌ಗಳ ಸಮಯದಲ್ಲಿ ಸಂಚಾರದ ಹರಿವನ್ನು ನಿಗಾವಣೆ ಮಾಡಲು ಬಳಸಲಾಗುತ್ತಿದೆ. ಈ ಕ್ಯಾಮೆರಾಗಳಿಂದ ಬರುವ ವಿಡಿಯೋಗಳನ್ನು ಸಂಚಾರ ನಿರ್ವಹಣಾ ಕೇಂದ್ರದಲ್ಲಿ ನೇರಪ್ರಸಾರದಲ್ಲಿ ವೀಕ್ಷಿಸಬಹುದಾಗಿದೆ.<br>• **ಸಹಯೋಗದ ಪ್ರಯತ್ನಗಳು:**<br>ವಿವಿಧ ಏಜೆನ್ಸಿಗಳು, ಪ್ರಧಾನ ಸಂಶೋಧನಾ ಸಂಸ್ಥೆಗಳು ಮತ್ತು ಎನ್.ಜಿ.ಓ ಗಳಾದ (IISc, IIT Madras, RASTA, BAF, CiSTUP) ಗಳೊಂದಿಗಿನ ಸಹಯೋಗಗಳು, ರಸ್ತೆ ಸುರಕ್ಷತಾ ಕ್ರಮಗಳನ್ನು ಹೆಚ್ಚಿಸಲು ಮತ್ತು ಡೇಟಾ-ಚಾಲಿತ ಒಳನೋಟಗಳು ಮತ್ತು ನವೀನ ಪರಿಹಾರಗಳ ಮೂಲಕ ಸಂಚಾರ ಹರಿವನ್ನು ಉತ್ತಮಗೊಳಿಸುವ ಗುರಿಯನ್ನು ಹೊಂದಿದೆ. ಪ್ರಸ್ತುತ ಬೆಂಗಳೂರು ನಗರದಲ್ಲಿ ಹೊಸದಾಗಿ 165 ಸಿಗ್ನಲ್ ಗಳನ್ನು ಸಿಂಕ್ರನೈಸ್ ಮಾಡಿ ಅಡಾಪ್ಟೀವ್ ಸಿಗ್ನಲ್‌ಗಳ ಅಳವಡಿಕೆ ಮಾಡುವ ಕಾಮಗಾರಿ ಪ್ರಗತಿಯಲ್ಲಿರುತ್ತದೆ. |

**ಟಿಡಿ 63 ಟಿಡಿಕ್ಯೂ 2024**

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು.